

Azim Premji Foundation

# BAYALU

## ಸಂಚಿಕೆ 115

April 2022

AN E-MAGAZINE BY THE FIELD INSTITUTES OF KARNATAKA

# CONTENTS


1. **Working with the volunteers**

Umashanker Periodi— *Page 3-5*

**2. ಸಾಹಿತ್ಯ ರಚನೆಗೆ ಸನ್ನಿವೇಶ ಸೃಷ್ಟಿಸಿ...**

Rashmi H S— Mandya DI—*Page 6-8*

**3. ಮಗುವಿನ ಭಾಷಾ ಬೆಳವಣಿಗೆಯಲ್ಲಿ ಸಂಪನ್ಮೂಲ ಕೊರತೆಯ ಪ್ರಭಾವ**

Jyothi—Azim Premji School, Yadgir– *Page 9-14*

**4. The Weightiness of April 1st**

Archana—Yadgir DI—Page 15-17


**Cover Art:**

Archana—Yadgir DI

# Working with the volunteers

## Umashanker Periodi

We have hired a lot of volunteers for our work on vaccination. The number is quite huge around 4000 people. These young volunteers have been hired from the villages and urban areas. These volunteers are enthusiastic young people, who are energetic and willing to do something. They want to act. As we finish our work in Vaccination by March, we do not want to let go of this huge group of young people who are ready to do anything. Hence this is an attempt to organize and mobilize these youths into some voluntary action groups. The main objective of the action with these young people should be to work on constitutional values. The work can be done in any form, with any community they are closer to.

There are two types of volunteers. One is the people who have come for a job and to earn some money. That is fine. We cannot do much with these types of people. We should ignore them. The other type is people who have some concern, people who want to do good. Do good to others, do good to fellow human beings, do good to the community, and do good to the society at large. It is these people that we need to work with. We need to encourage them and support them. We need to facilitate their work. We can invest and build their capacity. We can work with them to make them effective and productive.

In constitutional values we can do quite a lot of work. We can help them understand the constitution and see what it says on different things. What right constitution provides us and others? Especially what rights it gives to the weaker section, the poor, the Dalits, women, and children. Understanding these things become the most important element of constitutional work. Once we understand this we should proceed towards implementation of these constitutional rights. We can take simple areas – gender, caste and religion and start working in a very simple way on these issues.

The main aim of working with these people will be to empower them. Make them ambassadors of Constitutional rights and values. These people should become fearless and effective. They should appear neutral and fighting for the

constitutional rights. They should help individuals who need help. They should organize people into small groups and fight for their rights. This will need a lot of your support. We should also help them in building relationship with the people. Ultimately this relationship building is very important for anything to happen with people, with community. We can start with individual help, move towards group work, and end up doing community work. It could start with helping the needy people in humanitarian aspects, helping people get their entitlements, but eventually it should end in constitutional work.

The approach to the work would be to build their capacity and make them powerful in their own situation. For this, we will have to build their capacity to become leaders. Powerful leaders. For this we will have to build in them confidence and give them some basic skills in understanding the situation, finding out the root cause of a problem, collecting data and analyzing the situation, mobilizing people, and strategizing one's action. We will have to build their capacity in these areas.

Skills to organize meetings, mobilize people, plan, and execute social action is another set of skills needed for these people. Leadership skills, communication and convincing skills are few of the skills needed for these volunteers. The other aspect is building relationships, relationships with people, govt officers, leaders, and community.

The being together will be their strength. Hence, we will have to help them come together and unite, federate for larger action. For our people this should not be a project or the main work. This should be part of their work. Their interest and passion. We can start with members who are interested and then extend it to others.

We can start with organizing discussion. Discussion could be on the films they have seen. The work here is to curate these films. We need to see this film and carefully choose these films for viewing. It could be the full film or a part of the film which can be used independently. Once the film is shown, we discuss with them. Expressing what they feel in public is very important.

Running an evening class and providing a space to learn for poor students also is a

step towards creating equal opportunity in education for poor students. Helping these students write competitive exams is another form of help towards equality. Hence, we will have to create small actions which are meaningful.

Gender is another area where we can do a lot of work towards equality. Treating girls and boys equal in classroom, sports, or in assigning work. There are so many areas where girls are not treated equally with boys. We need to treat girls and boys equally.

There are schools where children of different castes sit differently and eat. We need to stop this. We need to create a space where all sit together and eat. We need to create spaces to be shared by boys and girls equally.

Religion is another area where there is a lot of discrimination. It appears natural. Hence, we will have to be extra cautious while dealing with religious issues. As far as possible, we need to plan things where all of us meet and do things together.


We need to work with these volunteers in these areas. Build their understanding on constitutional values and executing the constitutional values where they are violated.

# ಸಾಹಿತ್ಯ ರಚನೆಗೆ ಸನ್ನಿವೇಶ ಸೃಷ್ಟಿಸಿ...

**Rashmi H S**
**Mandya DI**

ಟ್ರಿಣ್ ಟ್ರಿಣ್.. ಟ್ರಿಣ್ ಟ್ರಿಣ್.. ಮೊಬೈಲ್ ರಿಂಗ್ ಆಗ್ತಿತ್ತು. ನೋಡಿದ್ರೆ ಆ ಕಡೆಯಿಂದ ಟೀಚರ್ ವಾಯ್ಸ್ 'Good morning, Happy Puneeth Rajkumar birthday' ಅಂತ ಬಂತು. 'Thank you', ಹೇಳಿ ಮೇಡಂ! ಏನ್ ಸಮಾಚಾರ, ಅಂತ ಕೇಳಿದಕ್ಕೆ–'ಇವತ್ತು ನಮ್ ಶಾಲೆಗೆ ಬನ್ನಿ, ತುಂಬಾ ದಿವಸದಿಂದ ಯಾವುದೂ ವಿಶೇಷ ದಿನ ಬಂದಿಲ್ಲ ಅಂತ ಕಾರ್ಯಕ್ರಮ ಮಾಡಿಲ್ಲ. ಇವತ್ತು ಮಕ್ಕಳಿಂದ ಕಾರ್ಯಕ್ರಮ ಮಾಡ್ಸೋಣ ಬನ್ನಿ ಅಂದ್ರು'. ಸರಿಯಾಗಿದೆ, ಮಾಡ್ಸೋಣ ಬರ್ತೀನಿ ಎಂದು ಭರವಸೆಯ ಮಾತುಕತೆಯೊಂದಿಗೆ ಸಂಭಾಷಣೆ ಮುಗಿಸಿದೆವು.

ಶಾಲೆಯಲ್ಲಿ ಅವರನ್ನು ಭೇಟಿ ಮಾಡಿ ಏನಾದರೂ ಪ್ಲಾನ್ ಮಾಡಿರುವಿರಾ...? ಇದ್ದರೆ ಹೇಳಿ ಎಂದಾಗ, ಸದ್ಯಕ್ಕೆ ಏನೂ ಮಾಡಿಲ್ಲ. ಇಬ್ಬರೂ ಸೇರಿ ಏನಾದರೂ ಆಕ್ಟಿವಿಟಿ ಮಾಡ್ಸೋಣ ಅಂತ ಹೇಳಿದ್ರು. ಸರಿ ಟ್ರೈ ಮಾಡೋಣ ಎಂದು 5, 6 ಮತ್ತು 7 ನೇ ತರಗತಿಗೆ ಹೋದೆವು. ತರಗತಿ ಪ್ರವೇಶಿಸಿ ಮಕ್ಕಳೊಟ್ಟಿಗೆ ಮಾತುಕತೆಯಾದ ನಂತರ, ಮಕ್ಕಳನ್ನುದ್ದೇಶಿಸಿ 'ಮಕ್ಕಳಾ! ಇವತ್ತು ಏನು ವಿಶೇಷ ಎಂದಾಗ..ಮೊದಲ ಧ್ವನಿಯೇ 'ಪುನೀತ್ ರಾಜ್ಕುಮಾರ್ ಹುಟ್ಟಿದಹಬ್ಬ', ಎಂದು ಒಕ್ಕೊರಲಿನಿಂದ ಕೂಗಿ ಹೇಳಿದ್ರು. "ಟೀಚರ್ ಆಗಿ ನಾವು ಇದೆಲ್ಲ ಆದ್ರೆ ಗೊತ್ತಿರುತ್ತೆ! ಪುಸ್ತಕ ಓದಿ, ಬರೀರಿ ಅಂದ್ರೆ ಮಾತ್ರ ಆಗಲ್ಲ", ಎಂದು ಗದರಿಸಿ ಸುಮ್ಮನಿರಿಸಬಹುದಿತ್ತು. ಆದ್ರೆ! ಹಾಗೆ ಮಾಡದೇ, ವೆರಿ ಗುಡ್, ಎಂದು ಪ್ರಶಂಸಿಸಿದೆ. ಇಲ್ಲಿ ಗಮನಿಸಬೇಕಾದ ಅಂಶ ಅಂದ್ರೆ, "ಮಕ್ಕಳು ಹೆಚ್ಚು ಇಷ್ಟಪಡುವ ವಿಷಯಗಳಿಂದಲೇ ಅವರು ಓದು ಬರಹಕ್ಕೆ ತೆರೆದುಕೊಳ್ಳುವಂತೆ ಮಾಡಬೇಕು. ಆಗ ಅವರ ಕಲಿಕೆಯು ವೇಗ ಮತ್ತು ಪರಿಣಾಮಕಾರಿಯಾಗಿ ಮುಂದುವರೆಯುತ್ತದೆ, ಎಂಬ ಸಾಮಾನ್ಯ ಸಂಗತಿಯನ್ನು ಪ್ರತಿಯೊಬ್ಬರೂ ಅಳವಡಿಸಿಕೊಳ್ಳಬೇಕು.


ನನ್ನ ನೆಚ್ಚಿನ ಬಂಗಾರದ ಮನುಷ್ಯ ಅದು ಏಕೆ ಎಂದರೆ
ಅಪ್ಪು ಅವರು ತುಂಬಾ ಒಳ್ಳೆಯ ಕೆಲಸವನ್ನು ಮಾಡಿದ್ದಾರೆ.
ಅವರು ಜನರಿಗೆ ಎಲ್ಲಾ ರೀತಿಯ ಒಳ್ಳೆ ಕೆಲಸವನ್ನು ಮಾಡಿದ್ದಾರೆ
ಯಾವ ಯಾವ ಕೆಲಸ ಎಂದರೆ ಅವರು ಹೆಣ್ಣು ಮಕ್ಕಳಿಗೆ ಶಾಲೆ
ಕಟ್ಟಿಸಿದ್ದಾರೆ. ಗೋ ಶಾಲೆ ಕಟ್ಟಿಸಿದ್ದಾರೆ. ಮತ್ತು ಅವರು ಚಿತ್ರರಂಗಕ್ಕೆ
ಇಳಿದಿದ್ದಾರೆ. ಅವರ ಅಮ್ಮ ಅಪ್ಪ ನ ಹೆಸರು ಪಾರ್ವತಮ್ಮ
ಮತ್ತು ಡಾ.ರಾಜ್‌ಕುಮಾರ್ ಅವರು ತುಂಬಾ ಒಳ್ಳೆಯವರು. ಅವರ
ಪುನೀತ್ ರಾಜ್‌ಕುಮಾರ್ ಯಾವಾಗಲೂ ನಗುಮುಖ ದಿಂದ ಇರುತ್ತಾರೆ
ಅವರು ಇವಾಗ ಇಲ್ಲ. ಆದರೂ ಅವರ ಹುಟ್ಟು ಹಬ್ಬವನ್ನು ತನ್ನ
ಹಬ್ಬದ ಹಾಗೆ ಆಚರಿಸುತಿದ್ದಾರೆ. ಅವರಿಗೆ ತುಂಬಾ ಒಳ್ಳೆಯ
ಹೆಸರು ಇಟ್ಟಿದ್ದಾರೆ ಅದರಲ್ಲಿ ಬಂಗಾರದ ಮನುಷ್ಯ ನನ್ನ
ನೆಚ್ಚಿನ ಹೆಸರು ಯಾರಿಗೆ ಗೊತ್ತ. ಬಂಗಾರದ ಮನುಷ್ಯ ಎಂದು
ಎಲ್ಲರಿಗೂ ಹೆಸರು ಇಡುವುದಿಲ್ಲ. ಬಂಗಾರಕ್ಕೆ ಬೆಲೆ ಕಟ್ಟಬಹುದು
ಆದರೆ ಇವರಿಗೆ ಬೆಲೆ ಕಟ್ಟಲಾಗುವುದಿಲ್ಲ. ಅವರಿಗೆ ತುಂಬಾ ಪ್ರಶಸ್ತಿ
ಪತ್ರ ಹಾಗೂ ಅವಾರ್ಡ್ ಕೊಟ್ಟಿದ್ದಾರೆ. ಅದಿಕ್ಕೆ ನನ್ನ ನೆಚ್ಚಿನ ಬಂಗಾರದ
ಮನುಷ್ಯ, ಅದಿಕ್ಕೆ ಅವರೆಂದರೆ ನನಗೆ ತುಂಬಾ ಇಷ್ಟ....


ನನ್ನ ನೆಚ್ಚಿನ ಬಂಗಾರದ ಮನುಷ್ಯ

ಪುನೀತ್ ರಾಜ್ಕುಮಾರ್ ನ ನೀವು ನೋಡಿದಿರಾ? ಹೇಗೆ ಗೊತ್ತು? ನಾವು ಅವರ ಹುಟ್ಟುಹಬ್ಬಾನ ಆಚರಿಸಬೇಕಾ? ಏಕೆ ಆಚರಿಸಬೇಕು? ಇದರಿಂದ ನಮಗೇನು ಸಿಗುತ್ತೆ? ಎಂದು ಕೆಲವು ಪ್ರಶ್ನೆಗಳನ್ನು ಕೇಳಿದಂತೆ ಸಾಕಷ್ಟು ಉತ್ತರಗಳು ಪುಂಖಾನುಪುಂಖವಾಗಿ ಬರುತ್ತಿದ್ದವು. ಟಿ. ವಿ. ಯಲ್ಲಿ ನೋಡಿದ್ದೇವೆ. ಫಿಲ್ಮ್ ಮಾಡ್ತರೆ, ಅವರು ಮಾಡಿರೊ ಸೇವೆ ಎಲ್ಲರಿಗೂ ತಿಳಿಯುತ್ತೆ, ಮುಂದೆ ನಾವೂ ಹೀಗೆ ಒಳ್ಳೆ ಮನುಷ್ಯರು ಆಗ್ಬೇಕು ಅನ್ನೋದು ತಿಳ್ಕೊತ್ತೀವಿ ಎಂದು ಒಟ್ಟೊಟ್ಟಿಗೆ

ಖುಷಿಯಾಗಿ ಉತ್ತರಿಸುತ್ತಿದ್ದರು. ಇಲ್ಲಿ ನೀನು ಹೇಳು, ನೀನು ಹೇಳು ಎನ್ನುವಂತೆಯೆ ಇರಲಿಲ್ಲ. ಹಾಗಾದರೆ ನಾನು ನಿಮಗೊಂದು ಟಾಸ್ಕ್ ಕೊಡ್ತೀನಿ ಎಂದು, ಕಪ್ಪುಹಲಗೆಯ ಮೇಲೆ ಒಂದು ವಾಕ್ಯ ರಚಿಸಿದೆ. "ನನ್ನ ನೆಚ್ಚಿನ – – – – – – – " ಹೀಗೆ ಬರೆದು ಪುನೀತ್ ರಾಜ್ಕುಮಾರ್ ಬಗ್ಗೆ ತುಂಬಾ ತಿಳ್ಕೊಂಡಿದ್ದೀರಿ. ನನಗೆ ನೀವೀಗ ಪುನೀತ್ ರಾಜ್ಕುಮಾರ್ ಅನ್ನು ಒಂದೇ ಪದದಲ್ಲಿ ಹೇಳಬೇಕು ಅಂದ್ರೆ ಹೇಗೆ ಹೇಳ್ತೀರಾ? ಎಂದದಕ್ಕೆ, ಪುನೀತ್ ರಾಜ್ಕುಮಾರ್, ಅಪ್ಪು, ದೊಡ್ಮನೆ ಹುಡ್ಗ, ಸಾವಿಲ್ಲದ ಸರದಾರ, ಮರೆಯದ ಮಾಣಿಕ್ಯ, ಮರೆಯಾದ ಮಾಣಿಕ್ಯ, ಮನೆಮಗ, ಪವರ್ ಸ್ಟಾರ್, ಕರುನಾಡ ಮನೆಮಗ, ರಾಜಕುಮಾರ, ನಗುವಿನ ಗಣಿ ಹೀಗೆ ಸಾಕಷ್ಟು ಹೆಸರುಗಳನ್ನು ಸೂಚಿಸಿದರು. ಅವರು ಸೂಚಿಸಿದ್ದನ್ನೇ ಒಂದೊಂದಾಗಿ ಬರೆಯುತ್ತಾ ಹೋದೆ. ನಂತರ ನೀವೆಲ್ಲರೂ ಬಿಟ್ಟ ಸ್ಥಳದಲ್ಲಿ ನೀವು ಪುನೀತ್ ನನ್ನು ಕರೆಯಲು ಬಯಸುವ ಒಂದು ಪದವನ್ನು ಅಲ್ಲಿ ಬರೆಯಬೇಕು. ಅದರ ಕೆಳಗೆ ಯಾಕೆ ಈ ಹೆಸರನ್ನೇ ಸೂಚಿಸಿದೆ ಎಂಬುದರ ವಿವರಣೆಯನ್ನು ಬರೆಯುವಂತೆ ಹೇಳಲಾಯಿತು. ಕೆಲವರು ಬರೆದಿದ್ದನ್ನು ಮೌಖಿಕವಾಗಿಯೂ ವಿವರಿಸಿದರು. ಇದು ಅವರ ಮೊದಲ ಟಾಸ್ಕ್ ಆಗಿತ್ತು.




ಎರಡನೆಯದಾಗಿ, ಕೆಲವು ಮಕ್ಕಳು ಚಿತ್ರ ಬಿಡಿಸಲು ಉತ್ಸುಕರಾಗಿರುವುದನ್ನು ಗಮನಿಸಿ, ಭಾವಚಿತ್ರವನ್ನು ಮಾಡಲು ಬಯಸುವವರು ಚಿತ್ರ ಬಿಡಿಸಿರಿ ಎಂದು ಅವಕಾಶ ಮಾಡಿಕೊಡಲಾಯಿತು. ಮಕ್ಕಳಿಗೆ ಕಲಿಕೆಯನ್ನು ಗಟ್ಟಿಗೊಳಿಸಲು ಆಯ್ಕೆಗಳನ್ನು ಮಾಡಿಕೊಡುವುದು ಹೆಚ್ಚು ಸೂಕ್ತ. ಆಯ್ಕೆ ನೀಡಿದಾಗ ಅವರ ಬರವಣಿಗೆಯು ಮತ್ತಷ್ಟೂ ತೀಕ್ಷ್ಣವಾಗುತ್ತದೆ. ಈ ಅವಕಾಶ ನೀಡಿದ ತಕ್ಷಣ ನಾನು ಬರೆಯುತ್ತೇನೆ, ನಾನು ಬರೆಯುತ್ತೇನೆ ಎಂದು ಮಕ್ಕಳ ಸಂಖ್ಯೆಯು ಹೆಚ್ಚುತ್ತಿತ್ತು. ಇದರಿಂದ ಅವರಿಗೆ ಬಣ್ಣಗಳ ಹೊಂದಿಕೆ, ಚಿತ್ರಗಳ ವರ್ಣನೆಯನ್ನು ಮಾಡತೊಡಗಿದರು.




ಮೂರನೆಯದಾಗಿ, ಮಕ್ಕಳ ಬರವಣಿಗೆಯನ್ನು ಉತ್ತೇಜಿಸುವಂತಹ ಕೆಲವು ಶಬ್ದಗಳನ್ನು ಗ್ರಾಫಿಕ್ ಆರ್ಗನೈಸರ್ ಗಳಾಗಿ ಕಪ್ಪುಹಲಗೆಯ ಮೇಲೆ ಬರೆಯಲಾಯಿತು. ಉದಾ: ರಾಜಕುಮಾರ, ಪಾರ್ವತಮ್ಮ, ಹುಟ್ಟು, ಕುಟುಂಬ, ಮಗು, ಆಟಪಾಠ, ಸರದಾರ, ಸಾಧಕ, ಚಲನಚಿತ್ರ, ಸಾವು ಇತ್ಯಾದಿ ಮಕ್ಕಳಿಗೆ ಇಲ್ಲಿ ಬರೆದಿರುವ ಪದಗಳನ್ನು ಬಳಸಿ, ನಿಮಗಿಷ್ಟವಾದ ಪದ್ಯ, ಕಥೆ, ಪ್ರಬಂಧ, ಒಗಟು ಹೀಗೆ ಯಾವುದೇ ಬಗೆಯ ಸಾಹಿತ್ಯ ಪ್ರಕಾರವನ್ನು ಬರೆಯಿರಿ ಎಂದು ಹೇಳಲಾಯಿತು. ತುಂಬಾ ಮಕ್ಕಳು ಪದ್ಯ ಮತ್ತು ಪ್ರಬಂಧ ಬರೆದಿರುವುದನ್ನು ಗಮನಿಸಲಾಯಿತು. ಈ

ಮೂರನೆಯದಾಗಿ, ಮಕ್ಕಳ ಬರವಣಿಗೆಯನ್ನು ಉತ್ತೇಜಿಸುವಂತಹ ಕೆಲವು ಶಬ್ದಗಳನ್ನು ಗ್ರಾಫಿಕ್ ಆರ್ಗನೈಸರ್ ಗಳಾಗಿ ಕಪ್ಪುಹಲಗೆಯ ಮೇಲೆ ಬರೆಯಲಾಯಿತು. ಉದಾ: ರಾಜಕುಮಾರ, ಪಾರ್ವತಮ್ಮ, ಹುಟ್ಟು, ಕುಟುಂಬ, ಮಗು, ಆಟಪಾಠ, ಸರದಾರ, ಸಾಧಕ, ಚಲನಚಿತ್ರ, ಸಾವು ಇತ್ಯಾದಿ ಮಕ್ಕಳಿಗೆ ಇಲ್ಲಿ ಬರೆದಿರುವ ಪದಗಳನ್ನು ಬಳಸಿ, ನಿಮಗಿಷ್ಟವಾದ ಪದ್ಯ, ಕಥೆ, ಪ್ರಬಂಧ, ಒಗಟು ಹೀಗೆ ಯಾವುದೇ ಬಗೆಯ ಸಾಹಿತ್ಯ ಪ್ರಕಾರವನ್ನು ಬರೆಯಿರಿ ಎಂದು ಹೇಳಲಾಯಿತು. ತುಂಬಾ ಮಕ್ಕಳು ಪದ್ಯ ಮತ್ತು ಪ್ರಬಂಧ ಬರೆದಿರುವುದನ್ನು ಗಮನಿಸಲಾಯಿತು. ಈ ಚಟುವಟಿಕೆಯಿಂದ ಮಕ್ಕಳಿಂದ ಒಗಟು, ಕಥೆಗಳನ್ನು ಬರೆಯಲು ಸಾಕಷ್ಟು ಸನ್ನಿವೇಶಗಳ ನಿರ್ಮಾಣ ಅಗತ್ಯ ಎಂಬುದನ್ನು ಮನವರಿಕೆ ಮಾಡಿಕೊಳ್ಳಲಾಯಿತು.





# ಮಗುವಿನ ಭಾಷಾ ಬೆಳವಣಿಗೆಯಲ್ಲಿ ಸಂಪನ್ಮೂಲ ಕೊಠಡಿಯ ಪ್ರಭಾವ

Jyothi
Azim Premji School, Yadgir

ಮಗು ತಾನು ಹುಟ್ಟಿ ಬೆಳೆಯುವ ಪರಿಸರದಲ್ಲಿ ಬಳಕೆಯಲ್ಲಿರುವ ಭಾಷೆಯನ್ನು ಸ್ವಾಭಾವಿಕವಾಗಿ ಕಲಿಯುತ್ತದೆ. ಮಗು ಈ ಪ್ರಪಂಚದಲ್ಲಿ ಕಣ್ಣು ಬಿಟ್ಟ ಕೂಡಲೆ ಕಾಣುವುದು ತನ್ನ ತಾಯಿ ಮುಖವನ್ನು, ಕೇಳುವುದು ತನ್ನ ತಾಯಿಯ ಧ್ವನಿಯನ್ನು, ಕೊನೆಗೂ ತನ್ನ ತಾಯಿಯನ್ನೆ ಅನುಕರಿಸಿ ಭಾಷೆಯನ್ನು ಕಲಿಯುವುದು. "ಸ್ವಸ್ಥ ಮರದ ಬೆಳವಣಿಗೆಗೆ ಸ್ವಸ್ಥಬೇರುಗಳಂತೆ, ಹೂವಿನೊಡನೆ ಸೇರಿಕೊಂಡಿರುವ ಬಣ್ಣ ಹಾಗು ಸುಗಂಧದಂತೆ ಮನುಷ್ಯನ ಸರ್ವತೋಮುಖವಾದ ವಿಕಾಸಕ್ಕೆ ಭಾಷೆಯು ಮೂಲಕಾರಣವಾಗಿರುತ್ತದೆ".

ಭಾಷಾ ಕೌಶಲ್ಯಗಳ ಅಭಿವೃದ್ಧಿಯನ್ನು ಭಾಷಾ ಬೆಳವಣಿಗೆ ಎನ್ನುತ್ತೇವೆ. ಎಲ್ಲಾ ತತ್ವಜ್ಞಾನಿಗಳು ಮತ್ತು ಭಾಷಾತಜ್ಞರು ಹೇಳುವ ಪ್ರಕಾರ ಕಲಿಕೆಗೆ ಮೂಲ ಸೌಲಭ್ಯವೆ ಕಲಿಕಾ ವಾತಾವರಣ(ಪರಿಸರ) ಸೃಷ್ಟಿಸುವುದು. ಪ್ರಾಥಮಿಕ ಹಂತದಲ್ಲಿ ಭಾಷಾ ಬೆಳವಣಿಗೆಯು ಆರೋಗ್ಯಕರ ಹಾಗು ಅರ್ಥಪೂರ್ಣವಾಗಿ ಬೆಳಸಬೇಕು. ಭಾಷೆಯ ಎಲ್ಲಾ ಕೌಶಲ್ಯಗಳನ್ನು ಕಲಿಸಲು ವ್ಯವಸ್ಥೆಗೊಳಿಸಲಾದ ಮತ್ತು ವಿನ್ಯಾಸಗೊಳಿಸಲಾದ ಸಂಪನ್ಮೂಲಗಳ ಸಂಗ್ರಹಣೆಯ ಕೋಣೆಯೆ ಭಾಷಾಸಂಪನ್ಮೂಲ ಕೊಠಡಿ.

ಕಲಿಕೆಯು ಒಂದು ನಿರಂತರ ಪ್ರಕ್ರಿಯೆ, ಹಾಗೆಯೆ ಕಲಿಕೆಗೆ ಸೂಕ್ತವಾದ ಪರಿಸರವನ್ನು ಒದಗಿಸುವಿಕೆಯು ಒಂದು ನಿರಂತರ ಪ್ರಕ್ರಿಯೆಯಾಗಿರುತ್ತದೆ. ಹಾಗಾಗಿ ನಮ್ಮ ಶಾಲೆಯಲ್ಲಿಯೂ ಕೂಡ ಭಾಷಾಸಂಪನ್ಮೂಲ ಕೊಠಡಿ ಸಿದ್ಧಪಡಿಸಲಾಗಿದೆ. ಈ ಕೊಠಡಿಯು ಮಕ್ಕಳ ಭಾಷಾ ಬೆಳವಣಿಗೆಯ ಮೇಲೆ ಬೀರಿದ ಪ್ರಭಾವ ಮತ್ತು ನನ್ನ ಅನುಭವವನ್ನು ಚಿಕ್ಕದಾಗಿ ತಮ್ಮೆಲ್ಲರೊಂದಿಗೆ ಹಂಚಿಕೊಳ್ಳುವ ಪ್ರಯತ್ನ ಇದಾಗಿರುತ್ತದೆ.

**ಕಲಿಕಾ ಕೊಠಡಿಯಲ್ಲಿರುವ ಕೆಲವು ಕಲಿಕಾಸಾಮಗ್ರಿಗಳು:-**

- ಕೆಲವು ಆಟಿಕೆ ಸಾಮಾನುಗಳು
- ದಿನನಿತ್ಯ ಜೀವನದಲ್ಲಿ ಬಳಸುವ ವಸ್ತುಗಳ ಚಿತ್ರ ಮತ್ತು ಹೆಸರುಗಳು (ವ್ಯವಸಾಯದ ಸಾಮಾನು, ತರಕಾರಿಗಳು, ಹಣ್ಣುಗಳು, ಅಡುಗೆ ಮನೆಯ ಸಾಮಾನುಗಳು ಇತ್ಯಾದಿಗಳು..)
- ಅಕ್ಷರಗಳ ಮಿಂಚುಪಟ್ಟಿ
- ಚಿತ್ರ ಮತ್ತು ಪದಗಳು (ದೇಹದ ಭಾಗಗಳು, ಪರಿಚಿತ ವಸ್ತುಗಳು, ಇತ್ಯಾದಿ)
- ಸರಳ, ಕಾಗುಣಿತ ಹಾಗು ಒತ್ತಕ್ಷರಗಳ ಪದಮಿಂಚು ಪಟ್ಟಿ

◊ ಕಥೆಗೆ ಸೂಕ್ತವಾದ ವಾಕ್ಯವನ್ನು ಜೋಡಿಸುವಿಕೆ.

◊ ಮಕ್ಕಳಿಂದ ತಯಾರಿಸಿದ ವಸ್ತುಗಳು (ಕಲಿತಿರುವ ಪದ್ಯದಲ್ಲಿ ಬಂದಿರುವ ಪದಗಳನ್ನು ಮಣ್ಣಿನ ಮಾದರಿಗಳನ್ನಾಗಿ ಮಾಡಿ ಅವುಗಳ ಮೇಲೆ ಹೆಸರುಗಳ ಚೀಟಿಯನ್ನು ಅಂಟಿಸುವುದು. ಉದಾ: ಒಂದು ದಿನ ಪೆದ್ದನ ಹೆಂಡತಿ ಲಡ್ಡು ಮಾಡಿದ್ಲು.. ಲಡ್ಡನ್ನು ಮಣ್ಣಿನಿಂದ ಮಾಡಿ ಅದಕ್ಕೆ ಹೆಸರು ಬರೆದಿರುವ ಹಾಳೆಯನ್ನು ಅಂಟಿಸುವುದು ಮುಂತಾದವು.

◊ ಕಾಗುಣಿತಗಳಿಂದ ಕೂಡಿದ ಸರಳ ಕಥೆಗಳು

◊ ಒತ್ತಕ್ಷರಗಳಿಂದ ಕೂಡಿದ ಸರಳ ಕಥೆಗಳು

◊ ವಿವಿಧ ಚಿತ್ರಸನ್ನಿವೇಶಗಳು

◊ ಪ್ರಾಸಪದ್ಯಗಳ ಕಾರ್ಡ್‌ಗಳು

◊ ಆಟಗಳಿಂದ ಕೂಡಿದ ಕಾರ್ಡ್‌ಗಳು(ಹಾವು-ಏಣಿ ಆಟದ ಮೂಲಕ ಪದಗಳನ್ನು ಬರೆಯುವುದು, ಓದುವುದು, ಅಭಿನಯ ಮಾಡಿ ತೋರಿಸುವುದು)

◊ ಭಿತ್ತಿ ಪತ್ರಗಳು( ಜಾತ್ರೆ, ಆರೋಗ್ಯ ಇಲಾಖೆ ಮುಂತಾದವು )

◊ ನಾಮಕರಣ, ಗೃಹಪ್ರವೇಶ, ಮದುವೆಯ ಆಮಂತ್ರಣ ಪತ್ರಿಕೆಗಳು

◊ ಚಿತ್ರಕ್ಕೆ ಸೂಕ್ತವಾದ ಹೆಸರು, ಅದರ ಕುರಿತು ಸರಳ ವಾಕ್ಯಗಳು

◊ ಪ್ರಕಾಶನದ ಕಥೆ ಕಾರ್ಡ್‌ಗಳು ಮತ್ತು ಕಥೆ ಪುಸ್ತಕಗಳು(ಪ್ರಥಮ್, ತುಲಿಕಾ, ಧ್ವನಿ)

◊ ಭಿತ್ತಿ ಚಿತ್ರಪಟಗಳು, ಅಕ್ಷರಪಟಗಳು, ಕಥೆಗಳು , ಪ್ರಾಸಪದ್ಯಗಳು, ತರಗತಿ ಪದ್ಯಗಳು.

◊ ಶಿಕ್ಷಣ ಇಲಾಖೆಯ ನಲಿ-ಕಲಿ ಸಾಮಗ್ರಿಗಳು

◊ ಓದುಕರ್ನಾಟಕ ಸಾಮಗ್ರಿಗಳು

◊ ಒಗಟುಗಳು

◊ ಗಾದೆಮಾತುಗಳು

◊ ಶುಭನುಡಿಗಳು

◊ ಪ್ರಾಣಿ ಪಕ್ಷಿಗಳ ಚಿತ್ರ ಮತ್ತು ಹೆಸರು

◊ ವ್ಯಾಕರಣಾಂಶಕ್ಕೆ ಸಂಬಂಧಿಸಿದ ಕಾರ್ಡ್‌ಗಳು (ವಚನಗಳು, ಲಿಂಗಳು, ಸಮನಾರ್ಥಕ ಪದಗಳು..)

**ನಾ ಕಂಡಂತೆ ಮಕ್ಕಳ ಭಾಷಾ ಕಲಿಕೆಯಲ್ಲಿ ಸಂಪನ್ಮೂಲ ಕೊಠಡಿಯ ಪ್ರಭಾವಗಳು.**

ಭಾಷಾ ಸಂಪನ್ಮೂಲ ಕೊಠಡಿಯು ಮಕ್ಕಳು ಕಲಿಕೆಯಲ್ಲಿ ಹೆಚ್ಚು ತೊಡಗಲು ಅವಕಾಶ ಮತ್ತು ಆಸಕ್ತಿಗೆ ಸ್ಥಳವನ್ನು ಒದಗಿಸುತ್ತದೆ. ಇಲ್ಲಿ ಮಕ್ಕಳ ಹಂತಕ್ಕೆ ಅನುಗುಣವಾಗಿ ಕಲಿಕಾ ಸಾಮಗ್ರಿಗಳಿರುವುದರಿಂದ ಅವರು ಸಾಮಾನ್ಯ ತರಗತಿಗಿಂತಲು ಹೆಚ್ಚು ಸಮಯ ಕಲಿಕೆಯಲ್ಲಿ ಆಸಕ್ತಿಯಿಂದ ಭಾಗವಹಿಸುತ್ತಾರೆ ಜೊತೆಗೆ ಅವರು ತಮ್ಮ-ತಮ್ಮ ಕಲಿಕಾ ಹಂತಕ್ಕೆ ಅನುಗುಣವಾಗಿರುವ ಕಲಿಕಾ ಸಾಮಗ್ರಿಗಳನ್ನು ತೆಗೆದುಕೊಂಡು ಸ್ವತಃ ಕಲಿಯುವುದನ್ನು ಕಲಿಯುತ್ತಿದ್ದಾರೆ. ಉದಾ: ೧) ಒಂದು ಜಾತ್ರೆಯ ಸನ್ನಿವೇಶವಿರುವ ಚಿತ್ರಪಟವನ್ನು ತೆಗೆದುಕೊಂಡು ಮಗು ತನ್ನ ಹಂತಕ್ಕೆ ತಕ್ಕಂತೆ ಅದರ ಕುರಿತು ಚಿತ್ರಸರಣಿಗಳ ರಚನೆ, ಚಿತ್ರ ಮತ್ತು ಪದ ಬರೆಯುವಿಕೆ, ಪರಿಚಿತ ಚಿತ್ರಗಳ ಪದಗಳ ಬರೆಯುವಿಕೆ, ವಾಕ್ಯಗಳ ರಚನೆ, ಕಥೆ ರಚನೆ ಮಾಡುವಿಕೆಯಲ್ಲಿ ಪಾಲ್ಗೊಳ್ಳುತ್ತಾರೆ. ಇಲ್ಲಿ ಮಕ್ಕಳು ಸ್ವತಃ ಸ್ನೇಹಿತರಿಗೆ ಕಲಿಸುವುದನ್ನು ಕಲಿ ಯುತ್ತಿದ್ದಾರೆ. ಮಕ್ಕಳು ಕಲಿಕಾ ಹಂತಕ್ಕೆ ಅನುಗುಣವಾ ಕಲಿಕಾ ಸಾಮಗ್ರಿಗಳನ್ನು ಸ್ವತಃ ತೆಗೆದುಕೊಂಡು

ಬಳಸಿಕೊಳ್ಳುತ್ತಿದ್ದಾರೆ, ವಿರಾಮದ ವೇಳೆಯಲ್ಲಿ ಸಂಪನ್ಮೂಲ ಕೊಠಡಿಯ ಸದ್ಬಳಕೆ ಮಾಡಿಕೊಳ್ಳುತ್ತಿದ್ದಾರೆ. ೨) ಅಕ್ಷರಗಳ ಧ್ವನಿ ಮತ್ತು ಆಕಾರ ಪರಿಚಯಿಸುವ ಸಾಮಗ್ರಿಯಲ್ಲಿ ಮಕ್ಕಳು ಮೊದಲು ಸ್ವರಆಕಾರಗಳನ್ನು (ಕಾಗುಣಿತದ ಮಾತ್ರಗಳು) ಗುರುತಿಸಲು ಮತ್ತು ಅಭ್ಯಾಸ ಮಾಡಲು ಕಲಿಯುತ್ತಾನೆ ನಂತರ ಕಲಿಯುತ್ತಿರುವ ಸ್ವರಆಕಾರಗಳ ಆಧಾರದ ಮೇಲೆ ಪದ, ವಾಕ್ಯ ಹಾಗೂ ಕಥೆಗಳನ್ನು ಅಭ್ಯಾಸ ಮಾಡುತ್ತಾರೆ. ಕೊವಿಡ್ ನಂತರದ ದಿನಗಳಲ್ಲಿ ಎರಡು ಮತ್ತು ಮೂರನೆ ತರಗತಿಯ ಹೆಚ್ಚು ಮಕ್ಕಳು ಪ್ರಾರಂಭಿಕ ಕಲಿಕಾ ಹಂತದಲ್ಲಿದ್ದರು ಮತ್ತು ಕೆಲವು ಮಕ್ಕಳು ಮಾತ್ರ ತರಗತಿ ಹಂತಕ್ಕೆ ಇದ್ದರು ಆ ಸಂದರ್ಭದಲ್ಲಿ ಸಂಪನ್ಮೂಲ ಕೊಠಡಿಯು ಎಲ್ಲಾ ಮಕ್ಕಳಿಗೆ ಸೂಕ್ತ ಕಲಿಕಾ ವಾತವರಣ ಮತ್ತು ಅನುಕೂಲ ಒದಗಿಸಲು ಸಾಧ್ಯವಾಯಿತು. ಈಗ ಮಕ್ಕಳ ಪ್ರಗತಿಯನ್ನು ನೋಡಿದರೆ ಮೊದಲಿಗಿಂತಲು ಹೆಚ್ಚು ಮಕ್ಕಳು ತರಗತಿ ಹಂತದ ಕಲಿಕೆಯಲ್ಲಿ ತೊಡಗಿದ್ದಾರೆ.

ಸಾಮಾನ್ಯವಾಗಿ ಮಕ್ಕಳು ಕಲಿಕೆಯಲ್ಲಿ ಹಿಂದುಳಿದಿದ್ದರೆ ಅವರ ಮತ್ತು ಮಾರ್ಗದರ್ಶಕರ ನಡುವೆ ಅಂತರ ಉಂಟಾಗಿ ಬಿಡುತ್ತದೆ. ಆದರೆ ಇಲ್ಲಿ ಮಗುವಿನ ಹಂತಕ್ಕೆ ತಕ್ಕಂತೆ ಕಲಿಕಾ ಸಾಮಗ್ರಿಗಳಿರುವುದರಿಂದ ಪ್ರತಿ ಮಗುವಿಗೆ ಸಾಧ್ಯವಾದಷ್ಟರ ಮಟ್ಟಿಗೆ ಮಾರ್ಗದರ್ಶಕರು ಸಮಯ ನೀಡಲು ಅವಕಾಶಸಿಗುವುದರಿಂದಾಗಿ ಇದು ಮಕ್ಕಳ ಮತ್ತು ಮಾರ್ಗದರ್ಶಕರ ನಡುವಿನ ಅಂತರವನ್ನು ಕಡಿಮೆಗೊಳಿಸುತ್ತದೆ. ಮಾರ್ಗದರ್ಶಕರಿಗೆ ಪ್ರತಿದಿನ ಕಲಿಕಾ ಸಾಮಗ್ರಿಗಳೊಟ್ಟಿಗೆ ತರಗತಿ ಮಾಡಲು ಅನುಕೂಲವಾಗಿರುತ್ತದೆ.

ಪ್ರಾಥಮಿಕ ಹಂತದ ತರಗತಿಗಳ ಕಲಿಕಾಫಲಗಳು ಸಾಮಾನ್ಯವಾಗಿ ಒಂದಕ್ಕೊಂದು ಸಾಮ್ಯತೆಯನ್ನು ಹೊಂದಿ ರುವುದರಿಂದ ಸಂಪನ್ಮೂಲ ಕೊಠಡಿಯ ಸಾಮಗ್ರಿಗಳನ್ನು ಬಹು ತರಗತಿ ಮತ್ತು ಬಹು ಹಂತದ ಮಕ್ಕಳಿಗೆ ತರಗತಿಯನ್ನು ತೆಗೆದುಕೊಳ್ಳಲು ಅನುಕೂಲಕರವಾಗಿದೆ. ಉದಾ: ಅಕ್ಷರಗಳ ಪರಿಚಯ, ಸರಳ ಪದಗಳು, ಕಾಗುಣಿತ ಪದಗಳಿಂದ ಹಿಡಿದು ಕಥೆ ಹಾಗು ಭಿತ್ತಿಪತ್ರಗಳು ಇತ್ಯಾದಿಗಳವರೆಗೆ ಬಳಸಬಹುದು. ಯಾವುದೋ ಕಾರಣದಿಂದಾಗಿ ನಮ್ಮ ದಿನದ ತರಗತಿ ಯೋಜನೆಯನ್ನು ಬದಲಾಯಿಸ ಬೇಕಾಗಿದ್ದಲ್ಲಿಯೂ ಕೂಡ ಅಂದಿನ ತರಗತಿನ್ನು ಬೇರೆ ಬೇರೆ ಚಟುವಟಿಕೆಗಳ ಮೂಲಕ ಅರ್ಥಪೂರ್ಣವಾಗಿ ಮಾಡಲು ಇದು ಸಹಾಯಕವಾಗಿದೆ. ಉದಾ: ವಿವಿಧ ಸನ್ನಿವೇಶಗಳ ಆಧಾರದ ಮೇಲೆ ಕಥೆ/ ಕವನ/ ಪ್ರಾಸಪದ್ಯಗಳ ರಚನೆಯ ಕುರಿತು ನಮ್ಮ ಯೋಜನೆ ಇರುತ್ತದೆ ಆದರೆ ಕೆಲವು ಮಕ್ಕಳು ಯಾವುದೋ ಪ್ರಾದೇಶಿಕ ಆಚರಣೆಯ ಕಾರಣದಿಂದ ಗೈರು ಹಾಜರಾಗಿದ್ದಲ್ಲಿ ಸಂಪನ್ಮೂಲ ಕೊಠಡಿಯನ್ನು ಗ್ರಂಥಾಲಯದ ವಿಧಾನದ ಮೂಲಕ ಮಕ್ಕಳಿಗೆ ತಮ್ಮಿಷ್ಟದ ಕಲಿಕಾ ಸಾಮಗ್ರಿಯನ್ನು ತೆಗೆದುಕೊಂಡು ಅದನ್ನು ಓದಿ, ಬರೆದು ತನ್ನದೆಯಾದ ರೀತಿಯಲ್ಲಿ ಅದರ ಕುರಿತು ಅಭಿಪ್ರಾಯ ವ್ಯಕ್ತಪಡಿಸು ಅವಕಾಶ ನೀಡುವುದು. ಇದರಿಂದಾಗಿ ತರಗತಿಯಲ್ಲಿರು ಎಲ್ಲಾ ಕಲಿಕಾ ಸಾಮಗ್ರಿಗಳು ಎಲ್ಲಾ ಮಕ್ಕಳಿಗೆ ಪರಿಚಯವಾಗುತ್ತವೆ ಮತ್ತು ತಮ್ಮ ಗೆಳೆಯರಿಗೆ ಅಗತ್ಯವಾದ ಸಾಮಗ್ರಿಯನ್ನು ಅವರವರೆ ಒದಗಿಸುತ್ತಾರೆ.


ಈ ಕೊಠಡಿಯ ಜೊತೆಗೆ ತರಗತಿಯ ಹೊರಭಾಗ ಹಾಗು ಶಾಲಾವರಣದಲ್ಲಿ ೧೫ ರಿಂದ ೨೦ ದಿನಕ್ಕೊಮ್ಮೆ ಕಲಿ ಕಾಫಲಗಳಿಗೆ ಪೂರಕವಾಗಿರುವ ಅಕ್ಷರ ಪಟಗಳು ಮತ್ತು ಚಟುವಟಿಕೆ ಆಧಾರಿ ಪಟಗಳು, ಚಿತ್ರಪಟಗಳನ್ನು (ಡಿಸ್‌ಪ್ಲೆನ್ನು) ಬದಲಾಸಲಾಗುತ್ತಿರುತ್ತದೆ ಮತ್ತು ಮಕ್ಕಳ ಬರವಣಿಗೆಗಳನ್ನು ಕಲಿಕಾ ಸಾಮಗ್ರಿಗಳಾಗಿ ಬಳಸಲಾಗುತ್ತಿದೆ.



ಸಂಪನ್ಮೂಲ ಕೊಠಡಿಯು ಕೇವಲ ಕಲಿಕೆಗೆ ಮಾತ್ರವಲ್ಲದೆ ಮಗುವಿನಲ್ಲಿ ಭಾವನಾತ್ಮಕ ಬೆಳವಣಿಗೆಯಲ್ಲೂ ಪ್ರಭಾವವನ್ನು ಬೀರುತ್ತಿದೆ. ಅಂದರೆ ಒಬ್ಬರು ಮತ್ತೊಬ್ಬರಿಗೆ ಸಹಾಯ ಮಾಡುವುದು, ಸ್ವಯಂ ಕಲಿಕಾ ಸಾಮಗ್ರಿಗಳ ಬಗ್ಗೆ ಕಾಳಜಿ, ಪ್ರೀತಿ, ಶಿಕ್ಷಕರಿಗೆ ನೆರವು ಮುಂತಾದ ಭಾವನಾತ್ಮಕ ಅಂಶಗಳನ್ನು ಪೋಷಿಸುವಲ್ಲಿ ನೆರವಾಗುತ್ತಿದೆ.

ಉದಾ: ಶಾಲಾ ಅವಧಿಯ ನಂತರದಲ್ಲಿ ಕಲಿಕಾ ಸಾಮಗ್ರಿಗಳ ಜೋಡಣೆ ಮತ್ತು ಸರಿಪಡಿಸುವಿಕೆ ಮುಂತಾದ ಕೆಲಸಗಳಲ್ಲಿ ಮಕ್ಕಳು ನನಗೆ ಸಹಾಯ ಮಾಡುತ್ತಾ ನನ್ನ ಜೊತೆ ಇರುತ್ತಾರೆ. (ಆಟೋ / ವಾಹನಗಳು ಬಂದಿರದ ಮಕ್ಕಳು)

ಒಟ್ಟಿನಲ್ಲಿ ಭಾಷಾಸಂಪನ್ಮೂಲ ಕೊಠಡಿಯು ಮಗುವಿನ ಬಹು ಹಂತದ ಭಾಷಾ ಕಲಿಕೆಗೆ ಅನುಕೂಲಕರವಾಗಿದೆ. ಒಂದು ರೀತಿಯಲ್ಲಿ ಭಾಷಾ ಪ್ರಯೋಗಾಲಯದ ನೋಟವನ್ನು ಮನಸ್ಸಿಗೆ ಬಿಂಬಿಸಿ ಹೋಗುತ್ತದೆ. ಮಾರ್ಗದರ್ಶಕರಿಗೆ ಹೊಸ ಕಲಿಕಾ ಸಾಮಗ್ರಿಗಳ ತಯಾರಿಕೆಗೆ ಮತ್ತು ಹೊಸ-ಹೊಸ ಆಲೋಚನೆಗೆ ಸ್ಫೂರ್ತಿದಾಯಕವಾಗಿದೆ. ಜೊತೆಗೆ ಮಕ್ಕಳಿಗಂತೂ ಕಲಿಕೆಗೆ ಸ್ವಯಂ ಸ್ಫೂರ್ತಿದಾಯಕ ಮತ್ತು ಮಾರ್ಗದರ್ಶಕವಾಗಿದೆ.















# The Weightiness of April 1st

**Archana**
**Yadgir DI**

As a general rule, I do not like April Fools' Day. The day of pranking one another was an oddly popular tradition while I was growing up. While all the other schools closed for the summer following the exam fever in March, our school's new academic year would begin on April 1st. There were several reasons presented for this decision of Kendriya Vidyalayas with one of them being based on the belief that students would have better continuity with their learning if they attended a month of school for the new academic year and then broke for the long summer. So, while other school students had to solve the previous year's exam papers or write something a 100 times as holiday homework, here are examples of some of our holiday homework over the years: for 7th class science, we had to draw every diagram in the textbook 5 times in practice for the entire year's exams; for 12th class chemistry, we were each given a practical notebook of the last year's batch to copy out the entire year's experiments so that our teacher didn't have to supervise the process over the year.

While we understood the astoundingly maleficent nature of these assignments, what was more damaging to the pre-pubescent and adolescent mind was the realization that we were a small group among a larger group of students who had to go to school on April 1st. Other school students afforded so many luxuries completely unavailable to us: the absolute pleasure of throwing your schoolbag on the last day of exams with the certainty of never touching it for the next two months; the dignity of a two-month break from your teachers' faces after they have

shamed your performance on results day; or the languor of sweet summer affecting your parents' memory about the impossible promises you made on results day of becoming a 'changed student' for the next academic year. Imagine never getting to shake off the frustration of exams through the act of throwing a schoolbag. Imagine not getting to lie about the exams going well, because the results would come out the very next week. Imagine having to fulfil every promise of studying hard, watching so much less TV, playing no sports, meeting no friends, using no phone, waking up so early. All because your results were announced on March 28th, and the school reopens for the next year on April 1st. Kids from other schools made the same promises. But there was a circle of agreement between student-teacher-parent that the long summer would mean to forget the exam scores and the lectures lashed at the student/child by teacher/parent.

**Let me illustrate this:**

| **Our schedule** | **Other school students' schedule** |
|---|---|
| Exams: March<br>Results and PTA: By March 29th<br>Scope to lie about performance in each exam paper: None | Exams: March<br>Results: Mid-April; PTA optional<br>Scope to lie about performance in each exam paper: High, as the results arrive a month after the exams end. |
| New Academic Year: April 1st | |
| Summer Break: May 1st week to June 3rd week | Summer Break: April and May |
| | New Academic Year: June 1st |
| Scope to lie about being a better student next year: None | Scope to lie about being a better student next year: High, as there is a gap of 4-5 weeks to forget the abysmal exam scores. |

<u>**Activities on April 1st:**</u>

**Waking up:** early, no later than 6 AM to illustrate your earnestness to be a good student.

**Getting dressed:** look gratefully towards parents for buying you new uniform, books, and other stationary despite your total worthlessness.

**Breakfast:** eat with a glow of quiet appreciation for your mother who has chosen to continue feeding you despite your total worthlessness.

**Drop-off to school (visit to a temple optional):** balance composure and feign emotion while a shortened version of the longer lecture about your duties as a student/child/future citizen is lashed out.

**At school:** nod respectfully at each teacher who has eviscerated you before your parents during PTA

**With friends:** behave as if unbothered about everything.

**Back at home:** review the entire day with both parents. No thoughts of TV, sports, or a chat with friends. Complete homework in the neatest handwriting you will produce all year. Prepare backpack for the next day and sleep early.

As if that weren't enough, imagine doing all this while every other friend from a different school is taunting you with an easy-going smile and a basketball tucked at their waist.

It was a sombre occasion in our school, this Fools' Day. While there were a few who managed to stay jovial and pull pranks like asking you to report to the principal or placing a small piece of sodium wrapped in plastic in the wash basin, they were distractions from the truth. Every April 1st, we were hoodwinked, bamboozled, led astray, and run amok!